ನೋಟ್ : 1) ಸಾಮಾನ್ಯ ಜನರಿಗೆ ವಿಧಿಸಲಾಗಿರುವ ಮೊತ್ತದ 50% ನ್ನು ಇಡಬ್ಲ್ಯೂಎಸ್‌ರವರಿಗೆ ಹಾಗೂ ಪರಿಶಿಷ್ಟ ಜಾತಿ : ಪಂಗಡದವರಿಗೆ ಶೇ 20 ರಷ್ಟು.

2) ಟೌನ್ ಮುನ್ಸಿಪಾಲಿಟಿ ಪ್ರದೇಶಗಳಲ್ಲಿ ಆಯಾ ಜಿಲ್ಲಾಧಿಕಾರಿ ಮತ್ತು ಸ್ಕ್ರೀನಿಂಗ್ ಕಮಿಟಿ ಅಧ್ಯಕ್ಷರು ಬೆಲೆ ನಿಗಧಿಪಡಿಸುವವರು, ಹೀಗೆ ನಿಗಧಿ ಪಡಿಸುವಾಗ ಅಲ್ಲಿನ ಮಾರ್ಕೆಟ್ ದರ ಹಾಗೂ ನೊಂದಣಾಧಿಕಾರಿಗಳು ನಿಗಧಿ ಪಡಿಸಿದ ದರವನ್ನು ನಿಗಧಿ ಪಡಿಸುವುದು.

ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸುವ ಪ್ರದೇಶಗಳ ತೆಃಖ್ತೆ

ಕ್ರಮ ಸಂಖ್ಯೆ	ಸರ್ಕಾರದ ಜಮೀನಿನ ಮೇಲೆ ಕಟ್ಟಲಾದ ಅನಧಿಕೃತ ಕಟ್ಟಡ ಗಳ ಸಕ್ರಮಗೊಳಿಸಲು ಉದ್ದೇಶಿಸಿರುವ ಒಟ್ಟು ಪ್ರದೇಶ	ಅನಧಿಕೃತವಾಗಿ ಕಟ್ಟಲಾದ ಕಟ್ಟಡಗಳ ಪ್ರದೇಶ	ಗರಿಷ್ಟ ಪ್ರದೇಶ
1)	200 ಚ. ಮೀಟರ್‌ವರೆಗೆ	ಯಾವುದೇ ಜಾಗವಿದ್ದಲ್ಲಿ	200 ಚ. ಮೀಟರು
2)	200 ಚ. ಮೀಟರ್ ಮೇಲ್ಪಟ್ಟು	200 ಚ. ಮೀಟರ್‌ಗಿಂತ ಕಡಿಮೆ ಇಲ್ಲದೆ	400 ಚ. ಮೀಟರ್
3)	400 ಚ. ಮೀಟರ್ ಮೇಲ್ಪಟ್ಟು ಹಾಗೂ 800 ಚ. ಮೀಟರ್‌ರವರೆಗೆ	400 ಚ. ಮೀಟರ್	800 ಚ. ಮೀಟರ್
4)	800 ಚ. ಮೀಟರ್ ಮೇಲ್ಪಟ್ಟು ಆದರೆ 1334 ಚ. ಮೀಟರ್ ಮೀರದಂತೆ	667 ಚ. ಮೀಟರ್	1334 ಚ. ಮೀಟರ್

ರಾಜ್ಯದಲ್ಲಿ ಪೋಲೀಸ್ ಠಾಣೆಗಳ ಸ್ಥಾಪನೆ

1208. ಶ್ರೀ ವಾಟಾಳ್ ನಾಗರಾಜ (ಚಾಮರಾಜನಗರ) :- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ರಾಜ್ಯದಲ್ಲಿ ಹೊಸದಾಗಿ ಎಷ್ಟು ಪೋಲೀಸ್ ಠಾಣೆಗಳನ್ನು ಎಲ್ಲೆಲ್ಲಿ ತೆರೆಯಲು ಸರ್ಕಾರ ನಿರ್ಧರಿಸಿದೆ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) –

ಅ) ಸರ್ಕಾರವು ಹುತಹಂತವಾಗಿ ಮುಂಬರುವ 3 ವರ್ಷ (1992–93ರಿಂದ 1994–95) ಗಳ ಅವಧಿಯಲ್ಲಿ 40 ಹೊಸ ಪೋಲೀಸ್ ಠಾಣೆಗಳನ್ನು ತೆರೆಯುವ ಪ್ರಸ್ತಾವನೆಯನ್ನು ಪರಿಶೀಲಿಸುತ್ತಿದೆ.

ಚುಕ್ಕೆ ಗುರುತಿನ ಮತ್ತು ಚುಕ್ಕೆಗುರುತಿಲ್ಲದ ಹತ್ತನೇ ಪಟ್ಟಿಯ ಪ್ರಶ್ನೋತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಉಪ ಸಭಾಧ್ಯಕ್ಷೆಯವರೆ, 9.3.92 ರಂದು ಪ್ರಶ್ನೋತ್ತರ ವೇಳೆಯು ರದ್ದಾದ ಕಾರಣ, ಆ ದಿನದ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ 10ನೇ ಪಟ್ಟಿಯಲ್ಲಿರುವ 20 ಪ್ರಶ್ನೆಗಳ ಪೈಕಿ, ಪ್ರಶ್ನೆ ಸಂಖ್ಯೆ : 1120, 1324, 1103, 1290, 1288 ಗಳನ್ನು ಹೊರತುಪಡಿಸಿ, ಉಳಿದ 15 ಪ್ರಶ್ನೆಗಳಿಗೆ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 10ನೇ ಪಟ್ಟಿಯ 146 ಪ್ರಶ್ನೆಗಳಿಗೆ ಪೈಕಿ ಈ ಪಟ್ಟಿಯಲ್ಲಿ ಕಾಣಿಸಿದಂಥ ಪ್ರಶ್ನೆಗಳ ಸಂಖ್ಯೆಯನ್ನು ಹೊರತುಪಡಿಸಿ, ಉಳಿದ 82 ಪ್ರಶ್ನೆಗಳಿಗೆ ಸಂಬಂಧಿಸಿದ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.